ANNEXURE-IV

No. of Houses completed from 1-1-1983 to 31-12-1983

Sl. No.	Name of the District	No. of houses completed from 1-1-1983 to 31-12-1983
1.	Bangalore	3396
2.	Kolar	2982
3.	Tumkur	2319
4.	Shimoga	4384
5.	Chitradurga	3382
6.	Mysore	4084
7.	Mandya	3422
8.	Kodagu	1573
9.	D. Kannada	4002
10.	Hassan	3964
11.	Chickmanglore	3181
12.	Belgaum	2817
13.	Dharwad	3292
14.	Bijapur	3220
15.	Karwar	3949
16.	Gulburga	4574
17.	Bidar	2035
18.	Raichur	4231
19.	Bellary	3284
	Total :	64,291

3. ANNOUNCEMENT

M. Speaker.—I have received the following message from the Deputy Chairman, Legislative Council.:

"As required by rule 114 of the Rules of Procedure and Conduct of Business in the Karnataka Legislative Council read with Rule 100, I send herewith the Electricity (Supply) (Karnataka Amendment) Bill, 1980 which has been agreed to by the Legislative Council on 1st February, 1984 without amendments."

I have received the following message from the Deputy Chairman, Legislative Council as required by Rule 114 of the Rules of Procedure and Conduct of Business in the Legislative Council.

I send herewith the following Bills which have been agreed to by the Legislative Council on 1st February, 1983 without amendments.

1. The Karnataka Motor Vehicles Taxation (Amendment) Bill, 1983.
2. The Public Wakfs (Extension of Limitation)(Karnataka Amendment) Bill, 1983.

3. The Karnataka Ministers Salaries and Allowances (Amendment) Bill, 1983.
4. The Code of Criminal Procedure (Karnataka Amendment) Bill, 1983.
5. The Karnataka Court Fees and Suits Valuation (Amendment) Bill, 1984.
6. The Karnataka Improvement Boards (Amendment) Bill, 1983.
7. The Karnataka Open Places (Prevention of Disfigurement) (Amendment) Bill, 1983.

ಶ್ರೀ ಕೆ. ಪಿ. ಶಾನಪ್ಪ.—ಅಧ್ಯಕ್ಷರೇ, ನಾನು ನಿಯಮ 334ರ ಕೆಳಗೆ 3 ಮತ್ತು 4ನೇ ದರ್ಜೆ ನೌಕರರು ಸಸ್ಪೆಂಡ್ ಆಗಿರುವ ವಿಷಯದಲ್ಲಿ ಒಂದು ನೋಟೀಸ್ ಕಳುಹಿಸಿದ್ದೆ. ಅದು ಇದುವರೆಗೂ ಬಂದಿಲ್ಲ. ಅವರನ್ನು ಕೆಲಸದಿಂದ ಸಸ್ಪೆಂಡ್ ಮಾಡಿ ಸುಮಾರು ಎರಡು ಎರಡುವರೆ ವರ್ಷಗಳಾಗಿವೆ.

ಅಧ್ಯಕ್ಷರು.— ಮೊದಲು ಕಾರ್ಯಕ್ರಮದ ಪಟ್ಟಿ ಪ್ರಕಾರ ಏನು ಇದೆ ಅದು ಮುಗಿಯಲಿ ಆಮೇಲೆ ಹೇಳಿ.

4. PRESENTATION OF REPORT

SRI M. VEERAPPA MOILY.—Sir, I beg to present the fourth Report of the Committee on Public Accounts on the Action taken by the Government on the recommendations Contained in the Eighth Report of the Committee on public Accounts 1980-82 (VI Assembly) on Finance Department and Housing and Urban Development Department.

Mr. SPEAKER :- Reports Presented

5. ನಿಯಮ 334ರ ಕೆಳಗಿನ ಚರ್ಚೆ

ವಿಷಯ : (i) ಶಾಸಕರಾದಂಥ ಶ್ರೀ ಜೆ.ಡಿ. ಸೋಮಪ್ಪನವರ ಕಾಫಿ ತೋಟದ ಮೇಲೆ ಅಧಿಕಾರಿಗಳು ಧಾಳಿ ಮಾಡಿರುವ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಸನ್ಮಾನ್ಯ ಅಧ್ಯಕ್ಷರೇ, ನಾನು ಈ ವಿಚಾರವನ್ನು ಎತ್ತುವಾಗ ಸನ್ಮಾನ್ಯ ಮುಖ್ಯ ಮಂತ್ರಿಗಳು ಇದ್ದರೆ ಒಳ್ಳೆಯದಿತ್ತು. ಇದು ಸದನದ ಶಾಸಕರಾದಂಥ ಸನ್ಮಾನ್ಯ ಜೆ.ಡಿ. ಸೋಮಪ್ಪನವರಿಗೆ ಸಂಬಂಧಪಟ್ಟಂಥ ವಿಚಾರ. ಸನ್ಮಾನ್ಯ ಶಾಸಕರಿಗೆ ಸಕಲೇಶಪುರದ ಹೆಬ್ಬಸಾಲೆ ಗ್ರಾಮದ ಸರ್ವೆ ನಂ. 323-24ರಲ್ಲಿ ಒಂದು ಕಾಫಿ ತೋಟ ಇದೆ. ನಿನ್ನೆ ಒಂಡನೇ ತಾರೀಖು ಬೆಳಿಗ್ಗೆ ಸುಮಾರು 5-30 ರಿಂದ 6-00 ಗಂಟೆಯ ಹೊತ್ತಿಗೆ ಹಾಸನ ಜಿಲ್ಲೆಯ ಜಿಲ್ಲಾಧಿಕಾರಿಗಳು, ಆರಣ್ಯಾಧಿಕಾರಿಗಳು, ಅಸಿಸ್ಟೆಂಟ್ ಕಮಿಷನರ್, ತಹಸೀಲ್ದಾರ್‌ರವರು ಈ ರೀತಿಯಾಗಿ ಸುಮಾರು 10-15 ಜನ ಅಧಿಕಾರಿಗಳು ಸೋಮಪ್ಪನವರ ಬಂಗಲೆಗೆ ಕಾರನ್ನು ಕಳುಹಿಸಿ ಒಂದು ದೊಡ್ಡ ಹಗರಣದಂತೆ ಎಲ್ಲಾ ತೋಟವನ್ನು ಆಳತೆ ಮಾಡಲಿಕ್ಕೆ ಹೋಗಿ ಬಿಟ್ಟಿದ್ದಾರೆ. ಈ ತರಹ ಒಬ್ಬ ಶಾಸಕರ ಮನೆಗೆ ರಾತ್ರಿ 2-00 ಗಂಟೆ ಸಮಯದಲ್ಲಿ ಅಧಿಕಾರಿಗಳು ಹೋಗಿ ಅನಾವಶ್ಯಕವಾಗಿ ಸಾರ್ವಜನಿಕರ ಎದುರುಗಡೆ ಶಾಸಕರಿಗೆ ಅವಹೇಳನ ಮಾಡುವುದು, ಅವರ ಘನತೆ ಮತ್ತು ಗೌರವಕ್ಕೆ ಧಕ್ಕೆ ಬರುವ ರೀತಿಯಲ್ಲಿ ಮತ್ತು ರಾಜಕೀಯ ಹಿತ ಸಾಧನೆ ಆಗಾಗುವ ರೀತಿಯಲ್ಲಿ ಕೃತ್ಯ ತೆಗೆದುಕೊಂಡಿದ್ದಾರೆಂದು ಸಾರ್ವಜನಿಕರಲ್ಲಿ ಅಭಿಪ್ರಾಯ ಬಂದಿದೆ. ವಿಧಾನ ಪರಿಷತ್ತಿನಲ್ಲಿ ಸನ್ಮಾನ್ಯ ಸದಸ್ಯರಾದ ಎ.ಕೆ. ಸುಬ್ಬಯ್ಯ ನವರು ನಾಲ್ಕೈದು ವರ್ಷಗಳ ಹಿಂದೆ ಈ ವಿಚಾರವನ್ನು ಎತ್ತಿದಾಗ ಇವರ ತೋಟದ ಸರ್ವೆಯಾಗಿದೆ. ಮತ್ತು ಯಾವುದೇ ರೀತಿಯಾದಂಥ ಒತ್ತುವರಿಯನ್ನು ಮಾಡತಕ್ಕದ್ದಾಗಲೀ, ಮಾಡ್ಸೋದಾಗಲೀ, ನಡೆದಿಲ್ಲವೆಂದು ವರದಿ ಸರ್ಕಾರದಲ್ಲಿದೆ. ಆದರೂ ಕೂಡಾ ಪುನಃ ಅಧಿಕಾರಿಗಳ ಅವಸರದಿಂದ ಅವರ ಗ್ರಾಮಕ್ಕೆ ಹೋಗಿ ಈ ರೀತಿ ಶಾಸಕರಿಗೆ ಅವಮಾನ ಮಾಡಿದರೆ ಬಹಳ ಅನ್ಯಾಯವಾಗುತ್ತದೆ. ಇದರಿಂದ ಶಾಸಕರಿಗೆ ಕೆಲಸ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಶಾಸಕರಾಗಲೀ, ಮಂತ್ರಿಗಳಾಗಲೀ, ಈ ರೀತಿಯಾಗಿ ಅವಹೇಳನಕ್ಕೆ ಗುರಿಯಾಗಬಾರದು. ಅಧಿಕಾರಿಗಳ ಒಂದು ದೊಡ್ಡ ತಂಡವನ್ನು ಹೀಗೆಂದು ಕೊಟ್ಟು ಕಳುಹಿಸಿದ್ದಾರೆಂದು ನನಗೆ ಮಾಹಿತಿ ಬಂದಿದೆ. ಸರ್ಕಾರ ಇದರ ಬಗ್ಗೆ ಒಂದು ಹೇಳಿಕೆ ಕೊಡಬೇಕಾಗುತ್ತದೆ. ಈ ರೀತಿಯಲ್ಲಿ ಪೊಲಿಟಿಕಲ್ ವಿಚ್ ಹಂಟಿಂಗ್, ಎ.ಪಿ. ಗಳ ಮನೆಗೆ ಸರ್ಚ್ ವಾರೆಂಟ್ ತೆಗೆದುಕೊಂಡು ಹೋಗುವುದು, ಮಾನ್ಯ ಹುಚ್ಚಮಾಸ್ತಿ ಗೌಡರ ಮೇಲೆ ಹಲ್ಲೆ ನಡೆಸುವುದು,